ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂ: ಬಿ12(5)/ಪಿಆರ್/35/2020-21 ದಿನಾಂಕ: 21-09-2020 ರಂತೆ ದಿನಾಂಕ: 12-10-2022 ರಂದು ಕಾಡುಗುಡಿ ವಾರ್ಡ್ ಸಂಖ್ಯೆ:104 (ಹಳೆ ನಂ.83)ರ ವಾರ್ಡ್ ಕಮಿಟಿ ಸಭೆಯನ್ನು ಹೋಟೇಲ್ ಶ್ರೀನಿಧಿ, ಹೋಫ್ ಫಾರಂ ವೃತ್ತ ಇಲ್ಲಿ ಶ್ರೀ.ಶ್ರೀನಿಧಿ, ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ನೋಡಲ್ ಅಧಿಕಾರಿಗಳು, ರವರ ಅಧ್ಯಕ್ಷತೆಯಲ್ಲಿ ನಡೆದಿರುವ ಸಭೆಯ ನಡುವಳಿಗಳು:

<u>ಈ ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿರುತ್ತಾರೆ</u>

- ಶ್ರೀ.ಶ್ರೀನಿಧಿ, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.
- ಶ್ರೀ.ಎನ್.ವೆಂಕಟೇಶ್, ಸಹಾಯಕ ಅಭಿಯಂತರರು.
- ಶ್ರೀ.ಸಂಧೀಪ್ ಕುಮಾರ್.ಎಲ್, ಕಿರಿಯ ಆರೋಗ್ಯ ನಿರೀಕ್ಷಕರು, ಎಸ್.ಡಬ್ಲ್ಯೂ.ಎಂ
- ಶ್ರೀ.ಶಿವರಾಜ್, ಎ.ಎಸ್.ಐ, ಕಾಡುಗುಡಿ ಪೊಲೀಸ್ ಠಾಣೆ
- ಶ್ರೀ.ವಿ.ರವಿಚಂದ್ರ, ಎ.ಇ, ಮೇಜರ್ ರೋಡ್ಸ್
- ಶ್ರೀ.ರವಿಕುಮಾರ್, ಎ.ಇ, ಬಿ.ಡಬ್ಲ್ಯೂ.ಎಸ್.ಎಸ್.ಬಿ
- ಶ್ರೀ.ಶಿವರಾಜ್‌ಕುಮಾರ್ ಅಂಗಡಿ, ಪಿ.ಎಸ್.ಐ. ಟ್ರಾಫೀಕ್, ವೈಟ್‌ಫೀಲ್ಡ್
- ಶ್ರೀ.ಪೀರ್‌ಪಾಷ, ಪಿ.ಸಿ, ಕಾಡುಗುಡಿ ಪೊಲೀಸ್ ಠಾಣೆ,
- ಶ್ರೀ.ಚನ್ನಬಸ್ಸಪ್ಪ, ಎ.ಎಸ್.ಐ. ಕಾಡುಗುಡಿ ಪೊಲೀಸ್ ಠಾಣೆ,
- ಪ್ರಭುದಾಸ್, ಜೆ.ಹೆಚ್.ಐ, ಕಾಡುಗುಡಿ
- ಶ್ರೀ.ವೆಂಕಟೇಶ್.ಕೆ.ಆರ್, ವಾರ್ಡ್ ಮಾರ್ಷಲ್

**ಕಾಡುಗುಡಿ ವಾರ್ಡ್‌ನ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ದವರು ಮತ್ತು ಸಾರ್ವಜನಿಕರು**

| | |
|---|---|
| 1. ಮಹಂತೇಶ್ ಗೌಡ | 6. ನಾನಿ.ಬಿ |
| 2. ರೋಮ | 7. ಎಂ.ಸಂಪಂಗಿ |
| 3. ಹೆಚ್.ಎಲ್.ವೆಂಕಟೇಶ್ | 8. ಮುರಳಿದರ್ |
| 4. ಸುಮನ್ ಸೇನಾಪತಿ | 9. ಎನ್.ಚಂದ್ರಶೇಖರ್ |
| 5. ರವಿಕಾಂತ್.ವಿ | 10. ಅರುಣ್ ಕುಮಾರ್ |

ಸಭೆಯಲ್ಲಿ ಹಾಜರಿದ್ದ ನೋಡಲ್ ಅಧಿಕಾರಿಗಳು, ಸಹಾಯಕ ಅಭಿಯಂತರರು - ಬಿ.ಬಿ.ಎಂ.ಪಿ, ಎ.ಇ.-ಬಿ.ಡಬ್ಲ್ಯೂ.ಎಸ್.ಎಸ್.ಬಿ ಹಾಗೂ ಕಾಡುಗುಡಿ ವಾರ್ಡ್‌ನ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರು ಮತ್ತು ಸಾರ್ವಜನಿಕರು ಉಪಸ್ಥಿತಿಯಲ್ಲಿದ್ದು, ಸಭೆಗೆ ಸ್ವಾಗತ ಕೋರಿ, ಸಭೆಯನ್ನು ಪ್ರಾರಂಭಿಸಲು ಸೂಚಿಸಿದರು.

1. ಹಿಂದಿನ ಸಭೆಯಲ್ಲಿ ನಡೆದ ನಡವಳಿಗಳ ವರದಿಯನ್ನು ಅನುಷ್ಠಾನಗೊಂಡಿರುವ ಬಗ್ಗೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ಮಾಹಿತಿಯನ್ನು ಪಡೆದು, ಸಾರ್ವಜನಿಕರ ಮುಂದೆ ಮಂಡಿಸಲಾಯಿತು.

1.ಸಭೆಯಲ್ಲಿ ಸಾರ್ವಜನಿಕರು ದಕ್ಷಣ ಪೀನಾಕೀಣಿ ನದಿಯಲ್ಲಿ ನೀರು ಸರಾಗವಾಗಿ ಹರಿಯಲು ಹೂಳನ್ನು ತೆಗೆಯಲು ಕೋರಿದರು,

- ಸದರಿ ವಿಷಯಕ್ಕೆ ಸಂಬಂಧಿಸಿದಂತೆ ವಾರ್ಡ್ ಅಭಿಯಂತರರು ಈಗಗಾಲೇ ಕಾಮಗಾರಿಯನ್ನು ನಿರ್ವಹಿಸಲು ಮಾನ್ಯ ಶಾಸಕರು ಮಹದೇವಪುರ ರವರು ಪೂಜೆಯನ್ನು ಮಾಡಿರುತ್ತಾರೆ, ಹಾಗೂ ರಾಜಾಕಾಲುವೆ ಕಾಮಗಾರಿಯನ್ನು ನಿರ್ವಹಿಸಲು ಅನುದಾನವನ್ನು ಸರ್ಕಾರದಿಂದ ಕೊಡಿಸುವುದಾಗಿ ತಿಳಿಸಿದರು.

Scanned with CamScanner

2. ಸಭೆಯಲ್ಲಿ ಸಾರ್ವಜನಿಕರು, ಚನ್ನಸಂದ್ರ ಸರ್ಕಲ್ ಬಳಿ ಇರುವ ಕೋಳಿ ಮಾಂಸದ ಅಂಗಡಿಯವರು ಕೋಳಿ ತ್ಯಾಜ್ಯವನ್ನು ರಸ್ತೆ ಬದಿಯಲ್ಲಿ ಎಸೆಯುತ್ತಿರುವುದು ಕಂಡುಬಂದಿದ್ದು, ಇದರಿಂದ, ಮಾರಕ ರೋಗ ಹರಡುವ ಬೀತಿ ಇರುವ ಬಗ್ಗೆ ತಿಳಿಸಿದರು.

- ➢ ಸದರಿ ವಿಷಯಕ್ಕೆ ನೋಡಲ್ ಅಧಿಕಾರಿಗಳು, ಶ್ರೀ.ಲೋಕೇಶ್ Asst.Director, Animal Husbandry ಮಹದೇವಪುರ ವಲಯ ರವರಿಗೆ ತಿಳಿಸುವುದಾಗಿ ಹೇಳಿದರು ಹಾಗೂ ಸಂದೀಪ ಜೆ.ಹೆಚ್.ಐ ರವರಿಗೆ ತೆರವುಗೊಳಿಸಲು ಕ್ರಮ ಕೈಗೊಳ್ಳಲು ತಿಳಿಸಿದರು.

3. ಸಭೆಯಲ್ಲಿ ಸಾರ್ವಜನಿಕರು ಎಫ್.ಸಿ.ಐ ಗೋಡೌನ್ ರಸ್ತೆಯಲ್ಲಿ ಕೆಲವು ವಾಹನಗಳನ್ನು ಸುಮಾರು ದಿನಗಳಿಂದ ನಿಲುಗಡೆ ಮಾಡಿದ್ದು, ರಸ್ತೆಯಲ್ಲಿ ಹಾದು ಹೋಗುವ ಇನ್ನಿತರೆ ವಾಹನಗಳಿಗೆ ತೊಂದರೆ ಉಂಟಾಗುತ್ತಿರುತ್ತದೆ. ಇದನ್ನು ಸರಿಪಡಿಸುವಂತೆ ಕೋರಿದರು.

- ➢ ಸದರಿ ವಿಷಯಕ್ಕೆ ಟ್ರಾಫೀಕ್ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ರವರು ಸದರಿ ವಾಹನಗಳಿಗೆ ದಂಡವನ್ನು ವಿಧಿಸಿ, ಸರಿಪಡಿಸುವುದಾಗಿ ತಿಳಿಸಿದರು.

4. ಸಭೆಯಲ್ಲಿ ಸಾರ್ವಜನಿಕರು Govt.Polytechnic College ಎದುರು, ರಸ್ತೆಯಲ್ಲಿ sanitary Chamber ನಿಂದ ನೀರು ಹೊರಗೆ ಚಿಮ್ಮುತ್ತಿದ್ದು, ಸದರಿ ರಸ್ತೆಯಲ್ಲಿ ಓಡಾಡುವ ಸಾರ್ವಜನಿಕರು ತುಂಬಾ ತೊಂದರೆಯಾಗುತ್ತಿದ್ದು, ಇದನ್ನು ಸರಿಪಡಿಸಿ ಕೊಡಲು ಕೋರಿದರು.

- ➢ ಸದರಿ ವಿಷಯಕ್ಕೆ ಶ್ರೀ.ರವಿಕುಮಾರ್, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಕಾಮಗಾರಿಯು ಟೆಂಡರ್ ಪ್ರಕೀಯೇಯು ಮೂಗಿದ್ದಿದ್ದು, ಕೂಡಲೇ ಸರಿಪಡಿಸಿಕೊಡುವುದಾಗಿ ತಿಳಿಸಿದರು.

5. ಸಭೆಯಲ್ಲಿ ಸಾರ್ವಜನಿಕರು ಚನ್ನಸಂದ್ರ ಸರ್ಕಲ್ ಬಳಿ ಇರುವ ಬಸ್ ನಿಲ್ದಾಣವನ್ನು ಹಿಂದಕ್ಕೆ ಸ್ಥಾಳಂತರಿಸಲು ಹಾಗೂ ರಸ್ತೆಗಳಲ್ಲಿ ಓಡಾಡುವ ಇನ್ ಇತರಾ ವಾಹಣಗಳು ಈಡಾಡಲು ತೊಂದರೇಯಾಗದಂತೆ ಸರಿಪಡಿಸುವಂತೆ ಕೋರಿದರು.

- ➢ ಸದರಿ ವಿಷಯಕ್ಕೆ ಶ್ರೀ.ರವಿ, ರ.ಮೂ.ಸೌ ರವರು ಈಗಾಗಲೇ ರಾಜಾಕಾಲುವೆಯ ಕಾಮಗಾರಿಯು ಟೆಂಡರ್ ಪ್ರಕೀಯೇಯು ಮೂಗಿದ್ದಿದ್ದು, ತದ ನಂತರ ಸ್ಥಳಾಂತರಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

6. ಸಭೆಯಲ್ಲಿ ಸಾರ್ವಜನಿಕರು ಚನ್ನಸಂದ್ರ ಕಾಡುಗುಡಿ ರಸ್ತೆಯಲ್ಲಿ ಸಂತೇ ನಡೆಯುವ ಸಮಯದಲ್ಲಿ ಅಂಗಡಿಯವರು ರಸ್ತೆಯಲ್ಲಿ ವ್ಯಾಪರಮಾಡುತ್ತಿದ್ದು, ಸಾರ್ವಜನಿಕರ ಓಡಾಡಕ್ಕೆ ತುಂಬಾ ತೊಂದರೆಯಾಗುತ್ತಿರುವುದಾಗಿ ಇದನ್ನು ಸರಿಪಡಿಸಿ ಕೊಡಲು ಕೋರಿದರು.

- ➢ ಸದರಿ ವಿಷಯಕ್ಕೆ ಕಂದಾಯ ವಸೂಲಿಗಾರರು ಶ್ರೀ. ಇಸ್ರೇಲ್ ರವರು ಸದರಿ ಮಾರುಕಟ್ಟೆ ಸ್ಥಳದ ಪ್ರದೇಶವು ತಕರರು ಇರುವುದಾರಿಂದ ಈ ವಿಷಯವನ್ನು ಸಹಾಯಕ ಕಂದಾಯ ಅಧಿಕಾರಿ ರವರಿಗೆ ತಿಳಿಸುವುದಾಗಿ ಸಭೆಯಲ್ಲಿ ತಿಳಿಸಿದರು.

7. ಸಭೆಯಲ್ಲಿ ಸಾರ್ವಜನಿಕರು ಚನ್ನಸಂದ್ರ ಮುಖ್ಯರಸ್ತೆಯ ಸಿದ್ದಾರ್ಥ ಬಡಾವಣೆಯ ಮುಖ್ಯರಸ್ತೆಯ ತಿರುವಿನಲ್ಲಿ ವಾಹಣ ಸಂಚಾರಿಗಳಿಗೆ ಅಡಚಾಡಣೆ ಉಂಟಾಗುತ್ತಿದ್ದು, ಸದರಿ ಸ್ಥಳದಲ್ಲಿ ಟ್ರಾಫೀಕ್ ಸೀಗ್ನಲ್‌ನ್ನು ಅಳವಡಿಸಲು ಕೋರಿದರು.

- ➢ ಸದರಿ ವಿಷಯಕ್ಕೆ ಟ್ರಾಫೀಕ್ ಪೋಲೀಸ್ ರವರು ವಿಷಯವನ್ನು ಮೀಲ್ಲಾಧಿಕಾರಿಗಳಿಗೆ ತಿಳಿಸುವುದಾಗಿ ಸಭೆಯಲ್ಲಿ ತಿಳಿಸಿದರು.

Scanned with CamScanner

8. ಸಭೆಯಲ್ಲಿ ಸಾರ್ವಜನಿಕರು ಚನ್ನಸಂದ್ರ ಮುಖ್ಯರಸ್ತೆಯಲ್ಲಿ ಪುಟ್‌ಪಾತ್ ತೆರವುಗೊಳಿಸುವ ಕಾರ್ಯಕ್ರಮವನ್ನು ಹಮೀಕೊಳ್ಳಲು ಕೋರಿದರು.

- ➢ ಸದರಿ ವಿಷಯಕ್ಕೆ ವಾರ್ಡ್ ಅಭಿಯಂತರರು ಪ್ರಸುತ್ತ ಮಳೆ ಬೀಳುತ್ತಿದು ಕೆಲವು ಪ್ರದೇಶಗಳಲ್ಲಿ ನೀರು ಮನೆಗಳಿಗೆ ನುಗುತ್ತಿರುವುದನ್ನು ತೆರವುಗೊಳಿಸಬೇಕಾಗಿರುವುದರಿಂದ ಕಾರ್ಮಿಕರ ಕೊರತೆಯಿದ್ದು ಮುಂದಿನ ದಿನಗಳಲ್ಲಿ ದಿನಾಂಕವನ್ನು ಗುರುತು ಮಾಡಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಅಂತಿಮವಾಗಿ ನೋಡಲ್ ಅಧಿಕಾರಿಗಳು ಸಕಾಲದಲ್ಲಿ ಸಾರ್ವಜನಿಕರ ಕುಂದು ಕೊರತೆಗಳನ್ನು ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಳ್ಳುವಂತೆ ಹಾಗೂ ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿಗಳಿಗೆ ಸಮನ್ವಯೆಯಿಂದ ಕೆಲಸ ನಿರ್ವಹಿಸಲು ಸೂಚಿಸಿರುತ್ತಾರೆ. ನೋಡಲ್ ಅಧಿಕಾರಿ ರವರ ಸೂಚನೆಯಂತೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

12/10/2022

(ಎನ್.ವೆಂಕಟೇಶ್)
ಸಹಾಯಕ ಅಭಿಯಂತರರು
ವಾರ್ಡ್ ನಂ: 104 ಕಾಡುಗುಡಿ

**ಪ್ರತಿಯನ್ನು**

1. ಮಾನ್ಯ ಜಂಟಿ ಆಯುಕ್ತರು, ಬಿ.ಬಿ.ಎಂ.ಪಿ ಮಹದೇವಪುರ ವಲಯ, ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ, ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ, ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಎಲ್ಲಾ ಸದಸ್ಯರುಗಳಿಗೆ ಮಾಹಿತಿಗಾಗಿ

Scanned with CamScanner